## ಶ್ರೀ ಸುತ್ತೂರು ಮಠ

**ಚಾಮುಂಡಿಬೆಟ್ಟದ ತಪ್ಪಲು, ಮೈಸೂರು**

# ಬೆಳದಿಂಗಳ ಸಂಗೀತ 290

**1 ಏಪ್ರಿಲ್ 2026 * ಬುಧವಾರ * ಸಂಜೆ 6.00**

**ದಿವ್ಯ ಸಾನ್ನಿಧ್ಯ**

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

**ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ**



**ಉಸ್ತಾದ್ ಡಾ. ಮೊಹಸಿನ್ ಖಾನ್**

**ಸಿತಾರ್ ವಾದನ**



**ಪಂ. ರಾಜೇಂದ್ರ ನಾಕೋಡ**

**ತಬಲ**

**ಸರ್ವರಿಗೂ ಹಾರ್ದಿಕ ಸುಸ್ವಾಗತ**

**ಉಸ್ತಾದ್ ಡಾ. ಮೊಹಸಿನ್ ಖಾನ್‌ರವರು** ಧಾರವಾಡ ನಗರದ ನಿವಾಸಿಗಳು. ಧಾರವಾಡ ಘರಾನಾದ 7ನೇ ತಲೆಮಾರಿನ ಪ್ರಮುಖ ಸಿತಾರ್ ವಾದಕರಾಗಿದ್ದಾರೆ. ಸಿತಾರ್ ರತ್ನ ರಹಿಮತ್ ಖಾನ್‌ರವರ ಮರಿಮೊಮ್ಮಕ್ಕಳು. ಐದನೇ ವಯಸ್ಸಿನಲ್ಲಿಯೇ ಅಜ್ಜ ದಿವಂಗತ ಉಸ್ತಾದ್ ಅಬ್ದುಲ್ ಕರೀಮ್ ಖಾನ್‌ರವರಿಂದ ಸಿತಾರ್ ಕಲಿಕೆಯನ್ನು ಆರಂಭಿಸಿದರು. ಬಳಿಕ ತಂದೆ ಉಸ್ತಾದ್ ಹಮೀದ್ ಖಾನ್‌ರವರಿಂದ ಹೆಚ್ಚುವರಿ ತರಬೇತಿ ಪಡೆದು ಇಂದು ದೇಶಾದ್ಯಂತ ಪ್ರಸಿದ್ಧರಾಗಿದ್ದಾರೆ. ಪರಿಶುದ್ಧತೆ, ಕಲಾತ್ಮಕತೆ ಮತ್ತು ವಿದ್ವತ್ಪೂರ್ಣ ಒಳನೋಟಗಳನ್ನುಳ್ಳ ಘರಾನಾದ ಸಮರ್ಥ ಪ್ರತಿನಿಧಿಯಾಗಿದ್ದಾರೆ. ಮಾಸ್ಟರ್ ಆಫ್ ಮ್ಯೂಸಿಕ್‌ನಲ್ಲಿ ಚಿನ್ನದ ಪದಕ ಪಡೆದರು. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪಡೆದಿದ್ದಾರೆ. 21ನೇ ವಯಸ್ಸಿಗೇ ಆಲ್ ಇಂಡಿಯಾ ರೇಡಿಯೋ ಮತ್ತು ದೂರದರ್ಶನದ 'ಎ' ದರ್ಜೆಯ ಕಲಾವಿದರಾದವರು. ಹಲವಾರು ಪ್ರತಿಷ್ಠಿತ ರಾಷ್ಟ್ರೀಯ ಸಂಗೀತ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಜರ್ಮನಿ, ಇಟಲಿ, ಜಪಾನ್, ದಕ್ಷಿಣ ಕೊರಿಯ, ಫ್ರಾನ್ಸ್, ನೆದರ್‌ಲ್ಯಾಂಡ್ಸ್, ನೇಪಾಳ ಮತ್ತು ರಷ್ಯಾ ಸೇರಿದಂತೆ ಯುರೋಪ್ ಮತ್ತು ಏಷ್ಯಾದ ಪ್ರತಿಷ್ಠಿತ ಅಂತಾರಾಷ್ಟ್ರೀಯ ಸಂಗೀತೋತ್ಸವಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಗುರು–ಶಿಷ್ಯ ಪರಂಪರೆಗೆ ಬದ್ಧರಾಗಿರುವವರು. ಪ್ರಪಂಚದಾದ್ಯಂತ ವಿದ್ಯಾರ್ಥಿಗಳಿಗೆ ತರಬೇತಿ/ಮಾರ್ಗದರ್ಶನ ನೀಡುತ್ತಿದ್ದಾರೆ. ವೃತ್ತಿಜೀವನದಲ್ಲಿ ಹಲವಾರು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ಪ್ರಸ್ತುತ ಕರ್ನಾಟಕ ವಿಶ್ವವಿದ್ಯಾಲಯದ ಸಂಗೀತ ಅಧ್ಯಯನ ವಿಭಾಗದಲ್ಲಿ ಸಹಾಯಕ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಜಾಗತಿಕ ವೇದಿಕೆಯಲ್ಲಿ ಸಿತಾರ್‌ನ ಶ್ರೀಮಂತ ಪರಂಪರೆಯನ್ನು ಸಂರಕ್ಷಿಸಲು ಮತ್ತು ಪ್ರಚಾರ ಮಾಡಲು ಅಹರ್ನಿಶಿ ಶ್ರಮಿಸುತ್ತಿದ್ದಾರೆ.

**ಪಂ. ರಾಜೇಂದ್ರ ನಾಕೋಡ್‌ರವರು** ಕರ್ನಾಟಕದ ಪ್ರಸಿದ್ಧ ಹಿಂದೂಸ್ತಾನಿ ತಬಲಾ ವಾದಕರು. ಧಾರವಾಡದ ಸುಪ್ರಸಿದ್ಧ ನಾಕೋಡ್ ಕಲಾ ಕುಟುಂಬಕ್ಕೆ ಸೇರಿದವರು. ಆರಂಭಿಕ ತರಬೇತಿಯನ್ನು ತಂದೆ ಪ್ರಖ್ಯಾತ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತಗಾರರಾಗಿದ್ದ ಪಂ. ಅರ್ಜುನ ನಾಕೋಡ್‌ರವರಿಂದ ಪಡೆದರು. ಬಳಿಕ ಹಿರಿಯ ಸಹೋದರರಾದ ಪಂ. ರಘುನಾಥ್ ನಾಕೋಡ್ ಮತ್ತು ಪಂ. ವಿಶ್ವನಾಥ್ ನಾಕೋಡ್‌ರವರುಗಳ ಬಳಿ ತಬಲಾ ಕಲಿಕೆಯಲ್ಲಿ ಪರಿಣತಿ ಪಡೆದರು.

ಅಖಿಲ ಭಾರತ ಆಕಾಶವಾಣಿಯ ‘ಎ’ ಶ್ರೇಣಿ ಕಲಾವಿದರು. ದೇಶವಿದೇಶಗಳ ಹಲವಾರು ಸಂಗೀತೋತ್ಸವಗಳಲ್ಲಿ ನಿರಂತರವಾಗಿ ಕಾರ್ಯಕ್ರಮ ನೀಡುತ್ತಿದ್ದಾರೆ. ಪಂ. ಬಸವರಾಜ್ ರಾಜಗುರು, ವಿದುಷಿ ಬೇಗಂ ಪರ್ವೀನ್ ಸುಲ್ತಾನಾ ಪಂ. ವಿಶ್ವ ಮೋಹನ್ ಭಟ್, ವಿದ್ವಾನ್ ಕದ್ರಿ ಗೋಪಾಲನಾಥ್ ಮುಂತಾದ ಪ್ರಸಿದ್ಧ ಸಂಗೀತಗಾರರಿಗೆ ತಬಲಾ ಸಹಕಾರ ನೀಡಿದ್ದಾರೆ. ಭಕ್ತಿ ತಾಳ ಸುಡರ್, ತಾಳ ಮಾರ್ತಾಂಡ, ಸಂಗೀತಶ್ರೀ, ಉಸ್ತಾದ್ ಬಾಲೇಖಾನ್ ಸ್ಮಾರಕ ಪ್ರಶಸ್ತಿ ಸೇರಿದಂತೆ ಹಲವಾರು ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.



# ಬೆಳದಿಂಗಳ ಸಂಗೀತ 291

## 1 ಮೇ 2026



ಗಾಯನ

ವಿದ್ವಾನ್ ಬಳ್ಳಾರಿ ಎಂ. ರಾಘವೇಂದ್ರ

ವಯೊಲಿನ್

ವಿದ್ವಾನ್ ಮತ್ತೂರು ಶ್ರೀನಿಧಿ





ಮೃದಂಗ

ವಿದ್ವಾನ್ ತುಮಕೂರು ಬಿ. ರವಿಶಂಕರ್

ಘಟಂ

ವಿದ್ವಾನ್ ಶರತ್ ಕೌಶಿಕ್



☎ 0821–2548221, 2548223 * ✉ sutturmath@jssonline.org